21 ಫೆಬ್ರವರಿ 2014

# <u>ಭಾಜಪ ಮತ್ತು ಆಂಧ್ರಪ್ರದೇಶ ವಿಭಜನೆ</u>

**ಅರುಣ್ ಜೇಟ್ಲಿ**

(ವಿರೋಧ ಪಕ್ಷದ ನಾಯಕರು, ರಾಜ್ಯ ಸಭಾ)

ತೆಲಂಗಾಣ ರಾಜ್ಯದ ಸ್ಥಾಪನೆ ಖಚಿತಗೊಂಡ ನಂತರ, ರಾಜಕೀಯ ಲಾಭಗಳಿಸುವವರ ಅಥವಾ ಅನ್ಯ ವಿಚಾರಗಳ ಕುರಿತು ರಾಜಕೀಯ ವೀಕ್ಷಕರು ಹಾಗೂ ಮಾಧ್ಯಮದವರು ವಿಶ್ಲೇಷಣೆ ಆರಂಭಿಸುವುದು ಸ್ವಾಭಾವಿಕ. ಕೇಂದ್ರ ಶಾಸಕಾಂಗದ ನಿರ್ಧಾರವನ್ನು ಸಂಕುಚಿತ ದೃಷ್ಟಿಕೋನದಿಂದ ಅವಲೋಕಿಸುವುದು ತರವಲ್ಲ. ತೆಲಂಗಾಣ ಆ ಭಾಗದ ನ್ಯಾಯೋಚಿತ ಆಶೋತ್ತರಗಳಿಗೆ ದೊರೆತ ಪ್ರತಿಫಲವಾಗಿದೆ. ಅವರ ಭಾವನೆಗಳ ಸೆಳವಿನ ತೀವ್ರತೆ ನೋಡಿದಾಗ, ಅದಕ್ಕೆ ಈಗಲೂ ಮಾನ್ಯತೆ ದೊರೆಯದಿದ್ದಲ್ಲಿ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುತ್ತಿತ್ತು. ಅವರ ಆಶೋತ್ತರಗಳ ಸೆಳವನ್ನು ತಡೆಯುವುದು ಅಸಾಧ್ಯದ ಮಾತಾಗಿತ್ತು.

ಈ ವಿಚಾರದಲ್ಲಿ ಕಾಂಗ್ರೆಸ್ ಪಕ್ಷ ಹಲವಾರು ವರ್ಷಗಳಿಂದ ಅನುಸರಿಸಿದ ವಿಳಂಬ ನೀತಿಯಿಂದ ಸಮಸ್ಯೆ ಮತ್ತಷ್ಟು ಉಲ್ಬಣಿಸಿತ್ತು. ಛತ್ತೀಸ್‌ಘಡ್, ಜಾರ್ಖಂಡ್ ಮತ್ತು ಉತ್ತರಾಖಂಡ್ ರಾಜ್ಯಗಳ ಸ್ಥಾಪನೆ ವಿಚಾರದಲ್ಲಿ ಸರ್ವಾನುಮತದ ನಿರ್ಣಯ ತೆಗೆದುಕೊಳ್ಳುವ ಪ್ರಯತ್ನ ನಡೆಸುವ ಬದಲು ರಾಜ್ಯದ ಜನರ ನಡುವೆ ಘರ್ಷಣೆ ಹೆಚ್ಚುವ ಪರಿಸ್ಥಿತಿಗೆ ಎಡೆಮಾಡಿಕೊಟ್ಟಿತು. ರಾಜ್ಯದ ಆಡಳಿತ ವ್ಯವಸ್ಥೆ ಸಂಪೂರ್ಣ ಕುಸಿದಿದೆ. ಆಂಧ್ರಪ್ರದೇಶ ಭಾರತ ದೇಶದ ಪ್ರಗತಿಪರ ರಾಜ್ಯಗಳಲ್ಲಿ ಒಂದಾಗಿದೆ. ವಿವಾದ ಬಗೆಹರಿಸಲು ರಾಜಕೀಯ ಲಾಭ ಮತ್ತು ರಾಜನೈತಿಕ ನೈಪುಣ್ಯತೆ, ಇವೆರಡರಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳುವ ಆವಶ್ಯಕತೆಯಿತ್ತು.

ಭಾಜಪ ರಾಜ್ಯ ಘಟಕ ತೆಲಂಗಾಣ ರಾಜ್ಯದ ಸ್ಥಾಪನೆಗೆ ಕಳೆದ ಮೂರು ದಶಕಗಳಿಂದ ಬದ್ಧವಾಗಿತ್ತು. 2006ರಲ್ಲೇ ಪಕ್ಷದ ಕೇಂದ್ರ ಘಟಕ ಬೇಡಿಕೆಯನ್ನು ಸಮರ್ಥಿಸಿತ್ತು. ಆದ್ದರಿಂದ ಭಾಜಪ ತನ್ನ ಎರಡೂ ಉದ್ದೇಶಪೂರ್ತಿಗೆ ಶ್ರಮಿಸಿದೆ. ಮೊದಲನೆಯದು, ತೆಲಂಗಾಣ ಪ್ರತ್ಯೇಕ ರಾಜ್ಯದ ಸ್ಥಾಪನೆ. ಎರಡನೆಯದು, ರಾಜ್ಯದ ವಿಭಜನೆಯಿಂದ ಆರ್ಥಿಕ ಹಿಂಜರಿಕೆ ಎದುರಿಸುವ ಸೀಮಾಂಧ್ರ ಪ್ರದೇಶಕ್ಕೆ ಸಂಪೂರ್ಣ ನ್ಯಾಯದೊರೆಯಬೇಕು. ತೀವ್ರ ಘರ್ಷಣೆಗೆ ಇಳಿಯುವವರು ದಿಢೀರ ಲಾಭಗಳಿಸುವ ಉದ್ದೇಶ ಹೊಂದಿರುತ್ತಾರೆ. ಎರಡೂ ಉದ್ದೇಶಗಳ ನಡುವೆ ಸಮತೋಲನ ಕಾಪಾಡುವುದು ವಿರೋಧಾಭಾಸವಲ್ಲ. ಪ್ರತ್ಯೇಕ ರಾಜ್ಯ ದೊರೆತ ತೆಲಂಗಾಣ ಪ್ರಾಂತ್ಯದ ಜನರಿಗೆ ಖುಷಿಯಾಗಿದ್ದು, ತೆಲಂಗಾಣದ ಭಾಗವಾಗಿ ಹೈದರಾಬಾದ್ ದೊರೆತಿರುವುದು ಅವರಲ್ಲಿ ಸಂತಸ ಮೂಡಿಸಿದೆ. ಶಾಸನ ರೂಪಿಸಲು ಭಾಜಪ ಸಮರ್ಥನೆ ಅತ್ಯಾವಶ್ಯಕವೆನಿಸಿತ್ತು. ಅಧಿಕಾರ ಸಮತೋಲನ ಭಾಜಪ ಕೈಯಲ್ಲಿತ್ತು. ನಾವು ಹಲವಾರು ವರ್ಷಗಳಿಂದ ತೆಲಂಗಾಣ ಪರವಾಗಿ ಹೊಂದಿದ ನಿಲುವಿಗೆ ಬದ್ಧರಾಗಿ ಮುಂದುವರೆದೆವು.

ಇನ್ನೆರಡು ಸವಾಲುಗಳು ಎದುರಾದವು. ಸೀಮಾಂಧ್ರ ಹಿತಾಸಕ್ತಿಯ ಸಮತೋಲನ ಹೇಗೆ ಸಾಧ್ಯ? ಎಚ್ಚರಿಕೆಯಿಂದ ಕಾರ್ಯವಹಿಸುವ ವಿರೋಧಪಕ್ಷವಾಗಿ ನಾವು ಸೀಮಾಂಧ್ರ ಪ್ರಾಂತ್ಯದ ಜನರ ಹಿತ ಕಾಪಾಡಲು ಹೈದರಾಬಾದ್ ಕಾನೂನು ಸುವ್ಯವಸ್ಥೆ ನಿರ್ವಹಣೆಯನ್ನು ಮಂತ್ರಿಮಂಡಳದ ಕೈಗೆ ನೀಡುವ ಬದಲು ರಾಜ್ಯಪಾಲರಿಗೆ ಹಸ್ತಾಂತರಿಸಲು ಸಂವಿಧಾನ ತಿದ್ದುಪಡಿ ಆವಶ್ಯಕವೆಂದು

ಸೂಚಿಸಿದ್ದೆವು. ಸರ್ಕಾರದ ಅರೆಮನಸ್ಸಿನ ಮತ್ತು ಅಸಮ್ಮತ ಪ್ರತಿಕ್ರಿಯೆಯಿಂದ ನಮ್ಮ ನಿಲುವಿಗೆ ಪುಷ್ಠಿದೊರೆಯಿತು. ಸೀಮಾಂಧ್ರ ಭಾಗದ ಆರ್ಥಿಕ ಹಿತಾಸಕ್ತಿ ಕಾಪಾಡಲು ಸರ್ಕಾರದಿಂದ ಸಕಾರಾತ್ಮಕ ಭರವಸೆ ಪಡೆಯುವುದು ನಮ್ಮ ಪಕ್ಷದ ನಿಶ್ಚಯವಾಗಿತ್ತು. ಈ ಉದ್ದೇಶಪೂರ್ತಿಗೆ ನಮ್ಮ ಬತ್ತಳಿಕೆಯಲ್ಲಿದ್ದ ಎಲ್ಲಾ ಸಂಸದೀಯ ತಂತ್ರ ನೈಪುಣ್ಯತೆಯನ್ನು ಬಳಸಬೇಕಾಯಿತು. ಜೊತೆಗೆ ನಮ್ಮಲ್ಲಿ ಸಂಖ್ಯಾಬಲ ಇದ್ದ ಕಾರಣ, ಸರ್ಕಾರದ ಮೇಲೆ ಒತ್ತಡ ಹೇರಲು ಅನುಕೂಲವಾಯಿತು. ಸೀಮಾಂಧ್ರ ಪ್ರಾಂತ್ಯಕ್ಕೆ ಐದು ವರ್ಷಗಳವರೆಗೂ ವಿಶೇಷ ಸ್ಥಾನಮಾನ ದೊರೆಯಬೇಕು, ಅನ್ಯ ರಾಜ್ಯಗಳಂತೆ ಸೀಮಾಂಧ್ರ ಭಾಗದಲ್ಲಿ ಬಂಡವಾಳ ಹೂಡಿದವರಿಗೆ ತೆರಿಗೆ ವಿನಾಯತಿ ದೊರೆಯಬೇಕು, ಆಂಧ್ರಪ್ರದೇಶದ ರಾಯಲ್‌ಸೀಮ ಮತ್ತು ಉತ್ತರ ಕರಾವಳಿ ಪ್ರದೇಶಗಳಿಗೆ ಹಿಂದುಳಿದ ಪ್ರದೇಶಕ್ಕೆ ಒಪ್ಪುವ ಪರಿಹಾರ ಸೂಚಿಸಬೇಕು ಎಂಬ ಭರವಸೆಗಳನ್ನು ರಾಜ್ಯಸಭೆಯಲ್ಲಿ ಸರ್ಕಾರದಿಂದ ನಮ್ಮ ಪಕ್ಷ ಪಡೆಯುವಲ್ಲಿ ಯಶಸ್ವಿಯಾಯಿತು. ರಾಷ್ಟ್ರೀಯ ಯೋಜನೆಯೆಂದು ಘೋಷಣೆಯಾದ ಪೋಲವರಂಗೆ ಪುನರ್ವಸತಿ ಮತ್ತು ಪರಿಹಾರ ಸೌಲಭ್ಯದೊರೆತಿದೆ. 14ನೇ ಹಣಕಾಸು ಆಯೋಗ ಸೀಮಾಂಧ್ರ ಭಾಗದ ಮುಂಗಡಪತ್ರದ ಗಾತ್ರ ನಿರ್ಧರಿಸುವವರೆಗೂ ಸಂಪನ್ಮೂಲ ಕೊರತೆಯನ್ನು ಕೇಂದ್ರ ಸರ್ಕಾರವೇ ಭರಿಸಬೇಕು ಎಂದು ನಾವು ಪಟ್ಟುಹಿಡಿದು ಒಪ್ಪಿಗೆ ಪಡೆದೆವು. ಈ ಪರಿಹಾರ ಸೂತ್ರ ನ್ಯಾಯೋಚಿತವಾಗಿದ್ದು, ಸೀಮಾಂಧ್ರ ಭಾಗದ ಹಿತಾಸಕ್ತಿ ಕಾಪಾಡಲು ಸಾಕಷ್ಟು ನೆರವು ನೀಡಲಿದೆ.

ಸೀಮಾಂಧ್ರ ಪ್ರದೇಶಕ್ಕೆ ಪ್ರತ್ಯೇಕ ರಾಜಧಾನಿ ನಿರ್ಮಿಸುವುದು ಸೇರಿದಂತೆ ವಿವಿಧ ಅನ್ಯ ವಿಚಾರಗಳಲ್ಲಿ ಹೆಚ್ಚಿನ ನೆರವಿಗೂ ಕೇಂದ್ರ ಸರ್ಕಾರದ ಸಹಕಾರ ಅಗತ್ಯವಾಗಿದ್ದರೆ, ಅದರ ಪೂರ್ತಿಗೆ ಬೆಂಬಲ ಸೂಚಿಸಲು ಭಾಜಪ ಬದ್ಧವಾಗಿದೆ.

ಈ ವಿಚಾರ ತಣ್ಣಗಾದ ನಂತರ, ಸ್ಪಷ್ಟವಾಗುವ ಅಂಶವೆಂದರೆ, ಅಖಂಡ ಆಂಧ್ರಪ್ರದೇಶದಲ್ಲಿ ಭಾಜಪ ಸಾಂಪ್ರದಾಯಿಕವಾಗಿ ಚಿಕ್ಕ ರಾಜಕೀಯ ಸಮೂಹವಾಗಿದ್ದರೂ ಅತಿ ಜವಾಬ್ದಾರಿಯುತ ಪಾತ್ರವನ್ನು ನಿರ್ವಹಿಸಿ ಇಬ್ಭಾಗವಾದ ಎರಡೂ ಪ್ರಾಂತ್ಯಗಳ ಜನರಿಗೆ ನ್ಯಾಯ ದೊರೆಕಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡಿದೆ.

**********